**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 25.02.2026**

**ಪಾಟಿ ಸವಾಲು : 2ನೇ ಎದುರುದಾರರ ಪರ ಶ್ರೀ ಎನ್ ಜೆ ವಕೀಲರಿಂದಃ**

ನಾನು ಅವಿದ್ಯಾವಂತ. ನನಗೆ ಸಹಿ ಮಾಡಲು ಮಾತ್ರ ಬರುತ್ತದೆ. ನಮ್ಮ ತಂದೆ ಜವರೇಗೌಡರು 1961ನೇ ಇಸವಿಯಲ್ಲಿ ಹುಟ್ಟಿರುತ್ತಾರೆಂದರೆ ಸರಿ. ನಮ್ಮ ತಂದೆಗೆ ನಾನು ಒಬ್ಬನೇ ಗಂಡು ಮಗ. ನಮಗೆ ಎರಡು ಎಕರೆ ಜಮೀನು ಇರುತ್ತದೆ. ಜಮೀನು ನನ್ನ ತಂದೆಯ ಹೆಸರಿನಲ್ಲಿದ್ದು ನಮ್ಮ ತಂದೆ ಮೃತಪಟ್ಟ ನಂತರ ಜಮೀನು ನನ್ನ ಹಾಗೂ ನನ್ನ ತಂಗಿಯ ಹೆಸರಿಗೆ ಜಂಟಿಯಾಗಿ ಖಾತೆ ಆಗಿರುತ್ತದೆ. ನನ್ನ ತಂದೆ ಮೃತಪಡುವ ಮೊದಲೇ ನನ್ನ ತಂಗಿಯ ವಿವಾಹ ಆಗಿರುತ್ತದೆ. ನಮ್ಮ ತಂದೆ ಯಾವುದೇ ಆದಾಯ ಬಂದಿಲ್ಲದೇ ಇದ್ದು ನಾನೇ ಅವರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಉತ್ತರಾದಿಕ್ರಿಯೆಗೆ ನಾನು ಎರಡು ಲಕ್ಷ ರೂ. ಹಣವನ್ನು ವೆಚ್ಚ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ತಿಳಿಸಿರುವಂತೆ ನಮ್ಮ ತಂದೆಗೆ ತಿಂಗಳಿಗೆ 30 ಸಾವಿರ ರೂ. ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ಆದಾಯದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಹಾಗೂ ನನ್ನ ತಂಗಿ ನಮ್ಮ ತಂದೆಯ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ಮರಣ ಪರೀಕ್ಷಾ ವರದಿಯಲ್ಲಿ ಅವರ ವಯಸ್ಸು 65 ವರ್ಷ ಎಂದು ಕಾಣಿಸಲಾಗಿದೆ ಎಂದರೆ ಸರಿ. ನಾವು ನಮ್ಮ ತಂದೆಯ ಆದಾಯದ ಮೇಲೆ ಅವಲಂಬಿತರಾಗಿರದ ಕಾರಣ 2ನೇ ಎದುರುದಾರ ಸಂಸ್ಥೆಯು ನಮಗೆ ಪರಿಹಾರ ನೀಡಲು ಬಾಧ್ಯ ಅಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.